ಅನುಕೂಲವಾಗುತ್ತದೆಂದು ನಮಗೆ ದೃಢ ವಿಶ್ವಾಸ ಇದೆ. ಆ ಪ್ರಯತ್ನವನ್ನು ನೀವು ಈಗಾಗಲೇ ನಡೆಸಿದ್ದೇವೆ. ಆದರೆ, ಇರತಕ್ಕಂಥ 13,500 ಜನರನ್ನು ಹೇಗೆ ಉಳಿಸಬೇಕೆಂಬುದಕ್ಕೆ ನಾವು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಖಂಡಿತವಾಗಿಯೂ ನಾವು ಇವರನ್ನು ಕೈಬಿಡಬೇಕೆಂಬುದು ಇಲ್ಲ. ಅವರ ರಕ್ಷಣೆಗೋಸ್ಕರವೇ ನಾವು ಪದೇ ಪದೇ ಪ್ರಯತ್ನ ಮಾಡುತ್ತಿದ್ದೇವೆ. ಯಾವ ದೃಷ್ಟಿಯಿಂದ ಆಗಬೇಕೆಂಬುದಕ್ಕೆ ಲಾ ಡಿಪಾರ್ಟ್‌ಮೆಂಟಿನವರೂ ಕೂಡ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ತಾವು ಹೇಳಿದಹಾಗೆ, ಈ ಕಂಟೆಂಪ್ಟ್ ಏನು ಹಾಕಿದ್ದಾರೆ ಆ ಕಂಟೆಂಪ್ಟ್ ಕೇಸಿಗೆ, ಸಮರ್ಥವಾದಂಥ ವಕೀಲರನ್ನು ಇಟ್ಟು, ಯಾವ ರೀತಿಯಾಗಿ ಆರ್ಗ್ಯುಮೆಂಟ್ ಮಾಡಬೇಕೋ ಅದನ್ನು ಮಾಡಲೇಬೇಕಾಗುತ್ತದೆ. ಆದರೆ, ಜಡ್ಜ್‌ಮೆಂಟ್ ಕೊಡತಕ್ಕಂಥಾದ್ದು ನಮ್ಮ ನಿಮ್ಮ ಕೈಯಲ್ಲಿ ಇಲ್ಲ. ಕೊನೆಗೆ ಸುಪ್ರೀಂ ಕೋರ್ಟಿನಿಂದ ಏನು ಆದೇಶ ಬರುತ್ತದೆ. ಅದನ್ನು ನಾವು, ನೀವು ಒಪ್ಪಿಕೊಳ್ಳಬೇಕು. ಆದರೆ, ಇದನ್ನು ಯಾವ ರೀತಿಯಾಗಿ ಇತ್ಯರ್ಥ ಮಾಡಬೇಕೆಂಬುದು ಬಹಳ ಮುಖ್ಯ. ಅದರ ಕಡೆ ಕರ್ನಾಟಕ ಸರ್ಕಾರದ ಗಮನ ಇದೆ. ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳುತ್ತೇನೆ. 13 ಜನ ಇನ್‌ಸ್ಪೆಕ್ಟರುಗಳನ್ನು ಏಕೆ ತೆಗೆದಿದ್ದೀರಿ ಎಂಬ ಪ್ರಶ್ನೆ. ಇವರು ಹಳ್ಳಿಯವರು ಇದ್ದಾರೆ ಎಂದು ವೆಯ್ಟೇಜ್ ಕೊಟ್ಟಮೇಲೆ ಬಂದಂಥವರು ಎಂದು ಹೇಳಿದಿರಿ. ಅದಕ್ಕೂ ನಾವು ಆದಷ್ಟು ಪ್ರಯತ್ನ ಮಾಡಿದ್ದೇವೆ. ಅದೂ ಕೂಡ ಕೋರ್ಟಿನಿಂದ ಬಂದಮೇಲೆ, ಮತ್ತೆ ಕೆ.ಎ.ಟಿ.ನಿಂದ ಅವರು ಸ್ಟೇ ತಂದಿದ್ದಾರೆ. ಅವರೂ ಮಧ್ಯದಲ್ಲೇ ಇದ್ದಾರೆ. ನಾವು ತೆಗೆಯಬೇಕೆಂದಿದ್ದರೆ, ಪ್ರಾರಂಭದಲ್ಲೇ ತೆಗೆಯುತ್ತಿದ್ದೆವು. ಆದರೆ, ಅನಿವಾರ್ಯವಾಗಿ ನಮಗೆ ಸುಪ್ರೀಂ ಕೋರ್ಟಿನಿಂದ ಬಂದಮೇಲೆ ಒಂದು ಕಂಟೆಂಪ್ಟ್. ಇದು ನಿಮಗೆ ಗೊತ್ತು, ಹಿಂದೆ ವಾಸುದೇವನ್ ಎಂಬ ಸೆಕ್ರಟರಿಯವರಿಗೇ ಒಂದು ತಿಂಗಳು ಒಳಗೆ ಹಾಕಿದ್ದರು. ಹಾಗೆ, ನಾಳೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ, ಕೋರ್ಟಿಗೂ ಮಾನ್ಯತೆ ಕೊಡಬೇಕು. ಅನೇಕಸಾರಿ, ಇಲ್ಲಿ ಕೋರ್ಟಿನ ನಿರ್ಣಯಗಳಿಗೆ ಏಕೆ ಮಾನ್ಯತೆ ಕೊಟ್ಟಿಲ್ಲವೆಂದೂ ಕೇಳುತ್ತೇವೆ. ಕೊಟ್ಟರೆ ಕೆಲವುಸಲ ಅನಾಹುತ ಕೂಡ ಆಗುತ್ತದೆ. ಈ ಪರಿಸ್ಥಿತಿ ಇದ್ದ ಕಾರಣ ಮತ್ತು ಕೆ.ಎ.ಟಿ.ಯಿಂದ ಸ್ಟೇ ತಂದಿದ್ದಾರೆಂದು ನಾವು ಹಾಗೇ ಇದ್ದೇವೆ. 13,500 ಜನಕ್ಕೆ ಏನು ಪರಿಹಾರ ಹುಡುಕುತ್ತಿದ್ದೇವೆ, ಆ ಪರಿಹಾರದಲ್ಲಿ ಅವರಿಗೂ ಕೂಡ ಅನುಕೂಲವಾಗಲಿ ಎಂಬುದೇ ನಮ್ಮ ಆಸೆ. ನಮ್ಮಲ್ಲಿ ವೇಕೆನ್ಸಿ ಕೂಡ ಇವೆ. ಸಧ್ಯಕ್ಕೆ ಕೈಹಚ್ಚಬಾರದು ಎಂದು ನಾವು ಹಾಗೆಯೇ ಕುಳಿತಿದ್ದೇವೆ. ಒಂದುವೇಳೆ ಎಲ್ಲರೂ ಚರ್ಚೆ ಮಾಡಿಕೊಳ್ಳುತ್ತಾ ಹೋದರೆ, ಯಾರಿಗೆ ತೊಂದರೆಯಾಗಿದೆಯೋ ಅವರು ಮತ್ತೆ ಕೋರ್ಟಿಗೆ ಹೋಗುತ್ತಾರೆ. ಅದಕ್ಕಾಗಿ, ದಯವಿಟ್ಟು ಇದನ್ನು ಇಲ್ಲಿಗೇ ಮುಗಿಸುವುದು ಒಳ್ಳೆಯದು.

Mr. Chairman:- The Government is also serious about the matter. Let us stop it.

ಊ) ಆಳಂದ ಕ್ಷೇತ್ರದ ಇನದಾಳ್ ಎಂಬ ಗ್ರಾಮದಲ್ಲಿ ಒಬ್ಬ ರೈತ ತನ್ನ ಬಾವಿಗೆ ಕರೆಂಟ್ ವೈರ್ ಜೋಡಣೆ ಮಾಡುವಾಗ ವಿದ್ಯುತ್ ತಗಲಿ ಸಾವನ್ನಪ್ಪಿದ್ದರಿಂದ ಪರಿಹಾರ ಕೋರಿಕೆ.

ಶ್ರೀ ಸುಭಾಷ್ ಗುತ್ತೇದಾರ್ (ಆಳಂದ):- ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಇನದಾಳ್ ಎಂಬ ಗ್ರಾಮದಲ್ಲಿ ದರೆಪ್ಪ ತಂದೆ ದುಂಡಪ್ಪ ಹೋಕಪುರ್ ಎಂಬ ಒಬ್ಬ ರೈತ ತನ್ನ

ಬಾವಿಗೆ ಕರೆಂಟ್ ತೆಗೆದುಕೊಳ್ಳಬೇಕೆಂದು ಒಂದು ಅರ್ಜಿ ಹಾಕಿದ್ದ, ಅದು ಮಂಜೂರು ಸಹ ಆಗಿತ್ತು. ಗುತ್ತಿಗೆದಾರರು ಬಂದಿದ್ದರಿಂದ ಆ ರೈತರಿಗೆ ಕಂಬ ಹತ್ತಿಸಿ ವೈರ್ ಬಿಗಿಯಲಿಕ್ಕೆ ಹೇಳಿದ, ಆ ಗುತ್ತಿಗೆದಾರ ಕಂಬದ ಮೇಲೆ ಏರಲಿಲ್ಲ, ಲೈನ್‌ಮ್ಯಾನ್‌ಗೆ ಮೇಲೆ ಏರಿಸಲಿಲ್ಲ. ಆ ರೈತನಿಗೆ ಮೇಲೆ ಏರಿಸಿದ್ದರಿಂದ ವೈರ್ ಜೋಡಣೆ ಮಾಡುವಾಗ ಮೈಯಿನ್ ಲೈನ್ ತಗಲಿ ಆ ರೈತ ತೀರಿಕೊಂಡ. ಆ ರೈತನಿಗೆ ಎರಡು ಪುಟ್ಟ ಪುಟ್ಟ ಮಕ್ಕಳಿದ್ದಾರೆ. ಆ ರೈತನಿಗೆ ಸರ್ಕಾರದಿಂದ ಪರಿಹಾರ ಏನಾದರೂ ಕೊಡುತ್ತೀರೇನು?

ಛೇರ್ಮನ್:- ನಿಮ್ಮ ಒಟ್ಟು ಅಭಿಪ್ರಾಯವೇನೆಂದರೆ ಆ ರೈತನಿಗೆ ಪರಿಹಾರ ಕೊಡಬೇಕೆನ್ನುವುದು.

ಶ್ರೀ ಸುಭಾಷ್ ಗುತ್ತೇದಾರ್:- ಮಾನ್ಯ ಅಧ್ಯಕ್ಷರೇ, ಹೌದು. ಗುತ್ತಿಗೆದಾರ ಏನು ಮಾಡಬೇಕಾಗಿತ್ತು ಲೈನ್‌ಮ್ಯಾನ್‌ಗೆ ಕಂಬಕ್ಕೆ ಏರಿಸಿ ವೈರ್ ಜೋಡಣೆ ಮಾಡಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ರೈತನಿಗೆ ಕಂಬಕ್ಕೆ ಏರಿಸಿ ವೈರ್ ಜೋಡಣೆ ಮಾಡಿಸಿದ. ಅದಕ್ಕೆ ಸರ್ಕಾರ ಆ ರೈತನಿಗೆ ಏನಾದರೂ ಪರಿಹಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆ ಸರಿಯಾಗಿದೆ. ಅದನ್ನು ನಮ್ಮ ಪವರ್ ಮಿನಿಸ್ಟರ್, ಅವರ ಗಮನಕ್ಕೆ ತಂದು ಎಲ್ಲಿ ಲೋಪದೋಷವಾಗಿದೆ. ಅದನ್ನು ಸರಿಪಡಿಸತಕ್ಕಂಥಾದ್ದು ಒಂದು. ಇನ್ನೊಂದು ಪರಿಹಾರ ಕೊಡಿಸತಕ್ಕಂಥಾದ್ದರ ಬಗ್ಗೆ ಕೂಡ ಅವರಿಗೆ ನಾನು ಸಲಹೆ ಮಾಡುತ್ತೇನೆ.

ಛೇರ್ಮನ್:- ಲೀಗಲ್ ಇದ್ದರೆ ಮಾನ್ಯ ಅವರು ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಎ. ರಾಮದಾಸ್‌ರವರು ಇಲ್ಲ. ಅವರ ವಿಚಾರ ನಾಳೆ ತೆಗೆದುಕೊಳ್ಳೋಣ. ಈಗ ಗಮನ ಸೆಳೆಯುವ ಸೂಚನೆ ಶ್ರೀ ಎಂ.ಎಸ್. ಆತ್ಮಾನಂದ.

11) ಗಮನ ಸೆಳೆಯುವ ಸೂಚನೆ

ಅ) ಮಂಡ್ಯ ಜಿಲ್ಲೆಯಲ್ಲಿನ ವಿಶ್ವೇಶ್ವರಯ್ಯ ನಾಲೆಯ ವ್ಯಾಪ್ತಿಯಲ್ಲಿ ಏತನೀರಾವರಿ ಕಾಮಗಾರಿಯನ್ನು ಸಂಪೂರ್ಣಗೊಳಿಸದೇ ಇರತಕ್ಕಂಥ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಮತ್ತು ಆರ್ಥಿಕ ನಷ್ಟ ಉಂಟಾಗುತ್ತಿರುವುದರ ಬಗ್ಗೆ -

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿನ ವಿಶ್ವೇಶ್ವರಯ್ಯ ನಾಲೆಯ ವ್ಯಾಪ್ತಿಯಲ್ಲಿ ಏತ ನೀರಾವರಿ ಕಾಮಗಾರಿಯನ್ನು ಸಂಪೂರ್ಣಗೊಳಿಸದೇ ಇರತಕ್ಕಂಥ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಮತ್ತು ಆರ್ಥಿಕ ನಷ್ಟ ಉಂಟಾಗುತ್ತಿರುವ ಬಗ್ಗೆ ನಾನು ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲೆಯಿಂದ ಲಿಫ್ಟ್ ಇರಿಗೇಶನ್ ಮಾಡಿಕೊಳ್ಳಬೇಕೆಂದು ಹಾಕಿದ ಪ್ರಶ್ನೆ. ಅದು ಸಣ್ಣ ನೀರಾವರಿಗೆ ಎಲ್ಲಿ ಬರುತ್ತದೆ? ಬರುವುದಿಲ್ಲ. ಅವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗ ಆ ಮುಖಾಂತರ ಮಾಡಿಸಿಕೊಂಡು ಒಂದು 340 ಎಕರೆಗೆ ಮತ್ತೊಂದು 240 ಎಕರೆಗೆ ಅನುಕೂಲ ಮಾಡಿಕೊಡಬೇಕೆಂದು ಮಾಡಿಕೊಂಡಿದ್ದಾರೆ. ಅದು ಖಂಡಿತವಾಗಿ ನಮ್ಮ